# IN THE COURT OF THE ADDL. SENIOR CIVIL JUDGE & JMFC., GUBBI

# **OS - 176/2022**

Witness present and duly sworn on : 23.02.2026.

Further cross Examination: by Counsel for Defendant No.6 :

1958 ರಲ್ಲಿ ನನ್ನ ತಂದೆಯ ಜೀವಿತ ಕಾಲದಲ್ಲಿ ಆದ ವಿಭಾಗ ಪತ್ರದ ನಂತರ ಬೇರೆ ಬೇರೆ ವಾಸ ಇದ್ದೇವು ಎಂದರೆ ಸರಿ. ಸದರಿ ವಿಭಾಗದಲ್ಲಿ ಬಂದ ಆಸ್ತಿಗಳ ಸ್ವಾಧೀನದಲ್ಲಿ ಪ್ರತ್ಯೇಕವಾಗಿ ಇದ್ದೇವು ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಇದ್ದೇವು. ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಪ್ರತ್ಯೇಕ ಸ್ವಾಧೀನ ಎಂದು 1958 ವಿಭಾಗ ಪತ್ರದಲ್ಲಿ ನಮೂದು ಇರುವುದಿಲ್ಲ. ಬೋಚಯ್ಯ, ರಾಮಲಿಂಗಯ್ಯ, ವೀರಭದ್ರಯ್ಯ ಮತ್ತು ಬೋರಯ್ಯ ರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಪಹಣಿಗಳು ಬಂದಿವೆ ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಕಂದಾಯ ದಾಖಲೆಗಳು ಬಂದಿರುತ್ತವೆ. ನನ್ನ ತಾತ ಲಿಂಗೇಗೌಡರವರು 1970-75 ರಲ್ಲಿ ಮರಣ ಹೊಂದಿರಬಹುದು. ಲಿಂಗೇಗೌಡ ರವರ ಪೌತಿ ಆಧಾರದ ಮೇಲೆ ದಾವಾ ಸಲ್ಲಿಸಲು ಪ್ರಯತ್ನ ಪಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಸಮಯದಲ್ಲಿ ನನ್ನ ತಂದೆಯು ಮರಣ ಹೊಂದಿರುತ್ತಾರೆ ಆದ ಕಾರಣ ದಾವೆ ಸಲ್ಲಿಸಲು ಆಗಲಿಲ್ಲ.

ನಾವು ದಾವಾ ಆಸ್ತಿಗಳ ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ಪಟ್ಟಾಬುಕ್ ಮತ್ತು ಕಂದಾಯ ರಶೀದಿಗಳನ್ನು ಹಾಜರುಪಡಿಸಿದ್ದೇವೆ. ನಾವು ಹಿಂದೂ ಅವಿಭಕ್ತ ಕುಟುಂಬದವರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. 1958 ವಿಭಾಗ ಪತ್ರದಲ್ಲಿ ಲಿಂಗೇಗೌಡ ರವರಿಗೆ ವೀರಮಾನಹಳ್ಳಿಯ ಸರ್ವೆ ನಂ.77/1, 69/1, 84/1, 71, 76/2, ಬೋರಪ್ಪನಹಳ್ಳಿ ಸರ್ವೆ ನಂ.193 ಮತ್ತು ಇತರೆ ಜಮೀನುಗಳು ಬಂದಿದ್ದವು, ಸಾಕ್ಷಿ ಮುಂದುವರೆದು ಸರ್ವೆ ನಂ.105/1 ಜಮೀನು ಲಿಂಗೇಗೌಡ ರವರ ಹೆಸರಿನಲ್ಲಿ ಇತ್ತು.

ಮೂಲತಹ ನನ್ನ ತಾತ ಲಿಂಗೇಗೌಡ ರವರಿಗೆ ಸದರಿ ಜಮೀನುಗಳನ್ನು ಹೊರತುಪಡಿಸಿ ಬೇರೆ ಜಮೀನುಗಳು ಇದ್ದವು. ಲಿಂಗೇಗೌಡ ರವರಿಗೆ ಮೂಲತಹ ಬೀರಮಾರನಹಳ್ಳಿ ಸರ್ವೆ ನಂ.69/1 ರಲ್ಲಿ 5 ಎಕರೆ18 ಗುಂಟೆ, ಸರ್ವೆ ನಂ.76/1 ರಲ್ಲಿ 5 ಎಕರೆ 9 ಗುಂಟೆ, ಸರ್ವೆ ನಂ.105/1, ಹಳೇ ಸರ್ವೆ ನಂ.48 ರಲ್ಲಿ 10 ಎಕರೆ, ಸರ್ವೆ ನಂ.84/1 ರಲ್ಲಿ 5 ಎಕರೆ 37 ಗುಂಟೆ, ಸರ್ವೆ ನಂ.84/2 ರಲ್ಲಿ 26 ಗುಂಟೆ, ಸರ್ವೆ ನಂ.84/3 ರಲ್ಲಿ 3 ಎಕರೆ 23 ಗುಂಟೆ, ಸರ್ವೆ ನಂ.77/1 ರಲ್ಲಿ 5 ಎಕರೆ 11 ಗುಂಟೆ ಎಂದರೆ ಸರಿ. ಲಿಂಗೇಗೌಡ ರವರ ಹೆಸರಿನಲ್ಲಿ ಸರ್ವೆ ನಂ.70 ರಲ್ಲಿ 3 ಎಕರೆ 25 ಗುಂಟೆ ನನಗೆ ಗೊತ್ತಿಲ್ಲ, ಸರ್ವೆ ನಂ.193 ರಲ್ಲಿ 2 ಎಕರೆ 20 ಗುಂಟೆ ಇರಬಹುದು. ಸರ್ವೆ ನಂ.193/26 ರಲ್ಲಿ 1 ಎಕರೆ 26 ಗುಂಟೆ ಎಂದರೆ ಸರಿ. ಹಿಡಗೂರು ಗ್ರಾಮದ ಮನೆ ವಿಸ್ತೀರ್ಣ 60X39 ಇರಬಹುದು, ಸರ್ವೆ ನಂ.57/30. ದೇವಿರಮ್ಮನ ಪಾಳ್ಯದ ಮೂರು ಖಾಲಿ ನಿವೇಶನಗಳು ಎಂದರೆ ಇರಬಹುದು. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಪಿತ್ರಾರ್ಜಿತ ಆಸ್ತಿಗಳನ್ನು ನನ್ನ ತಾತ ಮತ್ತು ಅವರ 4 ಜನ ಮಕ್ಕಳು ದಿನಾಂಕಃ 01.06.1958 ರಂದು ವಿಭಾಗ ಪತ್ರ ಮಾಡಿಕೊಂಡಿದ್ದರು ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗದ ಆಧಾರದ ಮೇಲೆ ಖಾತೆ ಪಹಣಿ ಬದಲಾವಣೆ ಆಗಿವೆ ಎಂದರೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳ ಖಾತೆ ಬದಲಾವಣೆ ಆಗಿವೆ.

(Further cross examination deferred at the request of counsel for the defendant No.6)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi